# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 656-2020** **ಸಿ. ಡಬ್ಲ್ಯುಃ 01**

**ಪಿ. ಡಬ್ಲ್ಯುಃ 02**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ /ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ಜಯಲಕ್ಷ್ಮಮ್ಮ<br>ಎಂ.ಡಿ.ಶ್ರೀನಿವಾಸ್<br>49 ವರ್ಷ<br>ಪಿ.ಎಸ್.ಐ, ಮಳವಳ್ಳಿ ಪೊಲೀಸ್ ಠಾಣೆ, ಮಳವಳ್ಳಿ<br>ಮಳವಳ್ಳಿ |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 08-08-2023 |

## ಮುಖ್ಯ ವಿಚಾರಣೆಃ ಶ್ರೀ ಎಪಿಪಿ ವಕೀಲರಿಂದಃ

ನಾನು ದಿ.16-11-2019 ರಿಂದ 22-02-2021 ರವರೆಗೆ ನಂಜನಗೂಡು ಸಂಚಾರಿ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.05-02-2020 ರಂದು ಮಧ್ಯಾಹ್ನ 3.50 ಗಂಟೆ ಸಮಯದಲ್ಲಿ ನಾನು ಚಾಸಾ-6, 8 ರವರನ್ನು ಕೆಎ-55-ಜಿ-189 ಇಲಾಖಾ ಜೀಪಿನಲ್ಲಿ ಕರೆದುಕೊಂಡು ಹುಲ್ಲಹಳ್ಳಿ ಸರ್ಕಲ್ ನಲ್ಲಿ ವಾಹನ ತಪಾಸಣೆ ಮಾಡುತ್ತಿದ್ದಾಗ ಎಸ್.ಬಿ.ಐ ಬ್ಯಾಂಕ್ ಮುಂಭಾಗ ನೋ ಪಾರ್ಕಿಂಗ್ ನಲ್ಲಿ ಕೆಎ-09-ಹೆಚ್.ಎಲ್.8207 ಹೋಂಡಾ ಆಕ್ಟೀವಾ ಹಾಗೂ ಮತ್ತೊಂದು ಹೋಂಡಾ ಆಕ್ಟಿವಾ ಕೆಎ-09-ಹೆಚ್.ಎಫ್-0701 ವಾಹನಗಳನ್ನು ನಿಲ್ಲಿಸಿದ್ದು, ನಮ್ಮ ಇಲಾಖಾ ಸಿಬ್ಬಂದಿಗಳಿಗೆ ನೋ ಪಾರ್ಕಿಂಗ್ ನಲ್ಲಿ ನಿಲ್ಲಿಸಿರುವ ವಾಹನಗಳನ್ನೆ ತೆಗೆಯುವಂತೆ ಸೂಚನೆ ನೀಡಿ ನಾನು ಮತ್ತು ನನ್ನ ಸಿಬ್ಬಂದಿ ಇಲಾಖಾ ವಾಹನದ ಮೈಕ್ ಮುಖೇನ ಅನೌನ್ಸ್ ಮಾಡಿದ್ದು ಯಾರು ಬಾರದೇ ಇದ್ದುದ್ದರಿಂದ ಚಾಸಾ-4 ರವರಿಗೆ ಸಂಬಂಧಿಸಿದ ಒಂದು ಗೂಡ್ಸ್ ವಾಹನವನ್ನು ತರಿಸಿ ಸಿಬ್ಬಂದಿಗಳ ಸಹಾಯದಿಂದ 2 ವಾಹನಗಳನ್ನು ಠಾಣೆಗೆ ತೆಗದುಕೊಂಡು ಹೋಗಿ ಠಾಣೆಯ ಆವರಣದಲ್ಲಿ ನಿಲ್ಲಿಸಿರುತ್ತೇನೆ. ಸಂಜೆ 4.15 ಗಂಟೆಗೆ ಕೆಎ-09-ಹೆಚ್.ಎಲ್-8207 ರ ವಾರಸುದಾರರೆಂದು ಹೇಳಿಕೊಂಡು ಆರೋಪಿ ಠಾಣೆಗೆ ಬಂದಿದ್ದು, ಅವರಿಗೆ ಠಾಣೆಯಲ್ಲಿ ಕುಳಿತುಕೊಳ್ಳಲು ತಿಳಿಸಿ ಚೇರ್ ನೀಡಿದ್ದು ಅವರು ಚೇರ್ ನಲ್ಲಿ ಕುಳಿತುಕೊಂಡ ನಂತರ ನಿಮ್ಮ ವಾಹನವನ್ನು ನೋ ಪಾರ್ಕಿಂಗ್ ನಲ್ಲಿ ನಿಲ್ಲಿಸಿದ್ದರಿಂದ ಫೈನ್ ಕಟ್ಟಿ ವಾಹನವನ್ನು

ತೆಗದುಕೊಂಡು ಹೋಗುವಂತೆ ತಿಳಿಸುತ್ತಿದ್ದಂತೆಯೇ ಏರು ಧ್ವನಿಯಲ್ಲಿ "ನೀವು ಬೀದಿ ನಾಯಿಗಳಂತೆ ಜೀವನ ಮಾಡ್ತಾ ಇದ್ದೀರಿ ನಾನು ಯಾಕೆ ಫೈನ್ ಕಟ್ಲಿ, ನಾನು ನಿಮ್ಮತರ ಬೀದಿ ನಾಯಿಗಳು ತರ ಜೀವನ ಮಾಡಲ್ಲ, ಅಂತಾ ಹೇಳಿದಾಗ ನಾನು ಸಮಾಧನಾದಿಂದ ಮರ್ಯಾದೆ ಕೊಟ್ಟು ಮಾತನಾಡು ಅಂತಾ ಹೇಳಿದಕ್ಕೆ, ನಾನು ನಿನ್ನ ಹೆಸರು ಬರೆದು ಸೂಸೈಡ್ ಮಾಡಿಕೊಳ್ಳುತ್ತೀನಿ ಇಲ್ಲದಿದ್ದರೆ ನಾನು ನಮ್ಮ ಅಪ್ಪನಿಗೆ ಹುಟ್ಟಿರುವುದಿಲ್ಲ ಎಂದು ಚೇರ್ ಅನ್ನು ತಳ್ಳಿ ಬೀಳಿಸಿ ನಮ್ಮ ಅಪ್ಪನ ಮನೆಯದ್ದು ನಾನು ತಿಂತೀನಿ ಯಾವ ಬೋಳಿ ಮಗನು ಏನು ಮಾಡೋಕೆ ಆಗೋದಿಲ್ಲ ಎಂದು ಎಷ್ಟು ಲಕ್ಷ ಕಟ್ಟಬೇಕು, ಎಷ್ಟು ಕೋಟಿ ಕಟ್ಟಬೇಕು" ಎಂದು ಬಾಯಿಗೆ ಬಂದಂತೆ ಏಕವಚನದಲ್ಲಿ ಬೈದು, ಮತ್ತೆ ಅವಾಚ್ಯ ಶಬ್ದಗಳಿಂದ ಬೈದು ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಆರೋಪಿಯು ನನಗೆ ಚಿನಾಲಿ ಮುಂಡೆ ಸೂಳೆ ಮುಂಡೆ ಎಂದು ಬೈದಿದ್ದು, ಆರೋಪಿ ಬೈದಿದ್ದರಿಂದ ನನಗೆ ಮನಸಿಗೆ ನೋವಾಗಿ 3 ದಿನಗಳ ಕಾಲ ಸರಿಯಾಗಿ ಊಟಾನು ಮಾಡಿರಲಿಲ್ಲ. ಆ ಸಮಯ ಮತ್ತೊಂದು ಹೋಂಡಾ ಆಕ್ಟಿವಾ ಸ್ಕೂಟರ್ ಕೆಎ–09–ಹೆಚ್–0701 ರ ಮಾಲೀಕರಾದ ರಾಜೇಶ್ವರಿ ಮತ್ತು ಆಟೋ ಚಾಲಕ ಪ್ರಕಾಶ್ ಮತ್ತು ಸ್ಬಿಬ್ಬಂದಿಗಳಾದ ಚಾಸಾ–4 ರಿಂದ 8 ರವರು ಆರೋಪಿಗೆ ಸಮಾಧಾನ ಮಾಡಿ ಗಲಾಟೆ ಬಿಡಿಸಿರುತ್ತಾರೆ. ನಾನು ಸಾರ್ವಜನಿಕ ಅಧಿಕಾರಿ ಆಗಿದ್ದು, ನನ್ನ ಬಳಿ ಬರುವ ಸಾರ್ವಜನಿಕರೊಂದಿಗೆ ಸಮಾಧಾನದಿಂದ ಅಹವಾಲನ್ನು ಸ್ವೀಕರಿಸದ ರೀತಿಯಲ್ಲಿ ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಈ ಸಂಬಂಧ ನಾನು ಅದೇ ದಿನ ನಂಜನಗೂಡಿನ ಪಟ್ಟಣ ಠಾಣೆಗೆ ದೂರು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಎಂದು, ಸಾಕ್ಷಿಯು ನಿಪಿ–2 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ನಾನು ದೂರಿನ ನೀಡಿದ ಮರುದಿನ ದಿ.06–02–2020 ರಂದು ನನಗೆ ತನಿಖೆಗೆ ಸಹಕರಿಸುವಂತೆ ನೋಟಿಸ್ ಜಾರಿ ಮಾಡಿದ್ದು ಅದನ್ನು ಸ್ವೀಕರಿಸಿ ದಿ.06–02–2020 ರಂದು ನಾನು ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಪಂಚರಾದ ಚಾಸಾ–2 ಮತ್ತು 3 ರವರನ್ನು ಬರಮಾಡಿಕೊಂಡು ನಾನು ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ಬೆಳಗ್ಗೆ 10.00 ರಿಂದ 10.45 ಗಂಟೆವರೆಗೆ ಸ್ಥಳ ಮಹಜರ್ ಅನ್ನು ಜರುಗಿಸಿರುತ್ತಾರೆ. ಸಾಕ್ಷಿಯು ಸ್ಥಳ ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–1 ಎಂದು ಗುರುತಿಸಲಾಗಿದ್ದು. ಸಾಕ್ಷಿಯು ನಿಪಿ–1 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–1(ಬಿ) ಎಂದು ಗುರುತಿಸಲಾಯಿತು. ಪಟ್ಟಣ ಪೊಲೀಸರು ನನಗೆ ಹಾಗೂ ಚಾಸಾ–2 ಮತ್ತು 3 ರವರಿಗೆ ತನಿಖೆಗೆ ಸಹಕರಿಸುವಂತೆ ನೀಡಿದ ನೋಟಿಸ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಎಂದು, ಸಾಕ್ಷಿಯು ನಿಪಿ–3 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ನಿಪಿ–1 ರ ಕಾಲದಲ್ಲಿ ಪೊಲೀಸರು ಘಟನಾ

ಸ್ಥಳದಲ್ಲಿ ಕರಡು ನಕಾಶೆಯನ್ನು ತಯಾರು ಮಾಡಿರುತ್ತಾರೆ. ಸಾಕ್ಷಿಯ ಕರಡು ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–4 ಎಂದು ಗುರುತಿಸಲಾಯಿತು. ದಿ.16–02–2020 ರಂದು ಈ ಕೇಸಿನ ಆರೋಪಿ ಶಿವಮ್ಮ ಎಂಬುವವರು ಠಾಣೆಗೆ ಹಾಜರಾಗಿ ನಾನು ಫೈನ್ ಕಟ್ಟುತ್ತೀನಿ ವಾಹನವನ್ನು ಬಿಡುಗಡೆ ಮಾಡಿ ಎಂದು ಕೇಳಿಕೊಂಡಿದ್ದರಿಂದ ದಂಡವನ್ನು ಕಟ್ಟಿಸಿಕೊಂಡು ರಶೀದಿಯನ್ನು ನೀಡಿ ವಾಹನವನ್ನು ಅವರಿಗೆ ಬಿಡುಗಡೆ ಮಾಡಿರುತ್ತೇನೆ. ಆರೋಪಿ ಬೈದಿದ್ದರಿಂದ ನನ್ನ ಮನಸ್ಸಿಗೆ ನೋವಾಗಿದ್ದರಿಂದ ನಾನು ದೂರು ನೀಡುವ ಸಮಯ ಆರೋಪಿ ನನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ ಎಂದು ತಿಳಿಸಿದ್ದು ನಂತರ ನನ್ನ ಮರುಹೇಳಿಕೆಯ ಸಮಯದಲ್ಲಿ ಆರೋಪಿಯು ನನಗೆ ಚಿನಾಲಿ ಮುಂಡೆ, ಸೂಳೆ ಮುಂಡೆ ಎಂದು ಬೈದಿದ್ದನ್ನು ನನ್ನ ಮರುಹೇಳಿಕೆ ಯನ್ನು ತಿಳಿಸಿರುತ್ತೇನೆ. ಆರೋಪಿ ಹಾಗೂ ರಾಜೇಶ್ವರಿ ರವರು ದಂಡ ಕಟ್ಟಿದ್ದ ರಶೀದಿಗಳನ್ನು ತನಿಖಾಧಿಕಾರಿಗಳು ಮುಂದೆ ಹಾಜರುಪಡಿಸಿರುತ್ತೇನೆ. ಆದೇ ರೀತಿ ಪೊಲೀಸ್ ಠಾಣಾ ದಿನಚರಿಯನ್ನು ತನಿಖಾಧಿಕಾರಿಗಳು ಮುಂದೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಶಿವಮ್ಮ ರವರು ದಂಡ ಪಾವತಿ ಮಾಡಿದ್ದ ರಶೀದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–5 ಎಂದು, ಸಾಕ್ಷಿಯು ರಾಜೇಶ್ವರಿ ರವರು ದಂಡ ಪಾವತಿ ಮಾಡಿದ್ದ ರಶೀದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–6 ಎಂದು, ಸಾಕ್ಷಿಯು ದಿ.05–02–2020 ಕ್ಕೆ ಸಂಬಂಧಿಸಿದ ಠಾಣಾ ದಿನಚರಿ ಹಾಗೂ ಐ.ಟಿ ದಿನಚರಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ–7 ಎಂದು, ಸಾಕ್ಷಿಯು ನಿಪಿ–7 ರಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗನ್ನು ಸಾಂಕೇತಿಕವಾಗಿ ನಿಪಿ–7(ಎ) ಎಂದು ಗುರುತಿಸಲಾಯಿತು. ನನಗೆ ಅವಾಚ್ಯ ಶಬ್ದಗಳಿಂದ ಬೈದು ಕರ್ತವ್ಯಕ್ಕೆ ಅಡ್ಡಿಪಡಿಸಿದ ವ್ಯಕ್ತಿಯು ನ್ಯಾಯಾಲಯದ ಮುಂದೆ ಇದ್ದು ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**